

## ಇದು ಅರ್ಧ ಕುಂಭಮೇಳ

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಉತ್ತರಭಾರತದ ಪ್ರಯಾಗ, ಹರಿದ್ವಾರ, ನಾಸಿಕ್ ಹಾಗೂ ಉಜ್ಜಯಿನಿಗಳಲ್ಲಿ ಕುಂಭಮೇಳ ನಡೆಯುತ್ತದೆ. ಈ ವರ್ಷದ ಕುಂಭಮೇಳ ಜನವರಿ 14ರಿಂದ ಆರಂಭವಾಗಿದೆ. ಪ್ರಯಾಗದಲ್ಲಿ ಮಾರ್ಚ್ 4ರವರೆಗೆ ನಡೆಯಲಿದೆ.

ಕುಂಭ ಮೇಳವೆಂದರೆ ಧಾರ್ಮಿಕ ಜನರ ಮಹಾಯಾತ್ರೆ. ಇದು 12 ವರ್ಷಗಳಿಗೊಮ್ಮೆ ನಡೆಯುತ್ತದೆ. ಹಾಗೆಯೇ ಆರು ವರ್ಷಗಳಿಗೆ ಒಮ್ಮೆ ನಡೆಯುವ ಮೇಳವನ್ನು ಅರ್ಧ ಕುಂಭ ಮೇಳ ಎನ್ನುತ್ತಾರೆ. ಇವು ನಡೆಯುವುದು ಹರಿದ್ವಾರ ಹಾಗೂ ಪ್ರಯಾಗಗಳಲ್ಲಿ ಮಾತ್ರ. ಪ್ರಸ್ತುತ ನಡೆಯುತ್ತಿರುವುದು ಅರ್ಧ 'ಕುಂಭ ಮೇಳ'.

ಕುಂಭಮೇಳದ ಅವಧಿಯಲ್ಲಿ ನದಿಯಲ್ಲಿ ಪವಿತ್ರ ಸ್ನಾನ ಮಾಡುವುದನ್ನು 'ಶಾಹಿ ಸ್ನಾನ' ಎನ್ನುತ್ತಾರೆ. ಒಟ್ಟು ಎಂಟು ದಿನಗಳಂದು 'ಪವಿತ್ರ ಸ್ನಾನ' ಆಯೋಜಿಸಲಾಗುತ್ತದೆ.

ಒಂದು ಲಕ್ಷ ಶೌಚಾಲಯಗಳನ್ನು ಸ್ಥಾಪಿಸಲಾಗಿದೆ. ಇವುಗಳಿಗೆ ಯಾವುದೇ ಕಾರಣಕ್ಕೂ ನೀರಿನ ಸಂಪರ್ಕ ಸ್ಥಗಿತಗೊಳ್ಳದಂತೆ ಗಮನಹರಿಸಲಾಗುತ್ತಿದೆ. ಉಳಿದಂತೆ ತ್ಯಾಜ್ಯಗಳ ಸಂಗ್ರಹಕ್ಕೆ ಯಾವತ್ತೂ ಪ್ಲಾಸ್ಟಿಕ್ ಡಬ್ಬಿಗಳನ್ನೇ ಆಶ್ರಯಿಸಲಾಗುತ್ತಿದ್ದು, ಈ ಸಲ ಅದನ್ನು ಪ್ಲಾಸ್ಟಿಕ್ ಬ್ಯಾಗುಗಳಿಗೆ ಬದಲಿಸಲಾಗಿದೆ. ರಸ್ತೆಯುದ್ದಕ್ಕೂ ಇಪ್ಪತ್ತು ಸಾವಿರ ಹಗುರ ಬ್ಯಾಗುಗಳನ್ನು ಸ್ಟ್ಯಾಂಡುಗಳಿಗೆ ಅಳವಡಿಸಲಾಗಿದೆ. ಮರುಬಳಕೆ ಮಾಡಬಹುದಾಗಿರುವುದೇ ಇವುಗಳ ವಿಶೇಷತೆ.

ಅತ್ಯಧಿಕ ಪ್ರಮಾಣದ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದು ಸವಾಲಿನ ಕೆಲಸ. ಇದಕ್ಕಾಗಿ ಟ್ರಕ್ ಹಾಗೂ ಟ್ರಾಕ್ಟರ್ ನಿಯೋಜಿಸಲಾಗಿದೆ. ಪ್ರತಿಯೊಂದು ವಾಹನಕ್ಕೂ ಜಿಪಿಎಸ್ ಅಳವಡಿಸಿ, ನಿರ್ದಿಷ್ಟ ಮಾರ್ಗವನ್ನು ಸೂಚಿಸಲಾಗಿರುತ್ತದೆ. ಈ ತಂತ್ರಜ್ಞಾನ ಬಳಕೆ ಮಾಡಿಕೊಂಡಿರುವುದು 'ಕುಂಭ ಮೇಳ'ದಲ್ಲಿ ಇದೇ ಮೊದಲು.

### ಟ್ಯಾಗ್ ಬಳಕೆ

ಕೋಟಿಗಟ್ಟಲೇ ಜನರು ಪಾಲ್ಗೊಳ್ಳುವ ಮಹಾಮೇಳದಲ್ಲಿ 'ಕಳೆದು' ಹೋಗುವುದಕ್ಕೇನು ಕಮ್ಮಿ? ಬೆಲೆಬಾಳುವ ಒಡವೆಗಳು ಸಿಕ್ಕರೆ ತಂದು ಕೊಡುವ ನಿದರ್ಶನಗಳೂ ಅಲ್ಲಿ ಹೇರಳ. ಕಳೆದಿದ್ದನ್ನು ಪಡೆಯುವ 'ಲಾಸ್ಟ್ ಅಂಡ್ ಫೌಂಡ್' ಕೇಂದ್ರಗಳು ಅಲ್ಲಲ್ಲಿ ಕಾಣಸಿಗುತ್ತವೆ. ಒಮ್ಮೆ ಇಣುಕಿದರೆ ಸಾಕು; ಚಿಕ್ಕಮಕ್ಕಳು, ಬ್ಯಾಗುಗಳು, ಪರ್ಸ್, ಮೊಬೈಲು, ಆಭರಣಗಳು ಇನ್ನೂ ಏನೇನೋ?!



ವಿಶೇಷವಾಗಿ ಮಕ್ಕಳನ್ನು ಕಳೆದುಕೊಂಡ ಪಾಲಕರ ಆತಂಕವನ್ನು ದೂರ ಮಾಡಲು ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲು ಮೇಳದ ಸಂಘಟನಾ ಸಮಿತಿ ಮುಂದಾಗಿದೆ. ಇದಕ್ಕಾಗಿ ಬಳಸುತ್ತಿರುವುದು – 'ರೇಡಿಯೊ ಫ್ರಿಕ್ವೆನ್ಸಿ ಐಡೆಂಟಿಫಿಕೇಶನ್ ಟ್ಯಾಗ್'. ಪಾಲಕರಿಂದ ಬೇರೆಯಾಗಿ ಎಲ್ಲೆಲ್ಲೋ ರೋದಿಸುತ್ತ ಅಲೆದಾಡುವ ಮಕ್ಕಳನ್ನು ಸುಲಭವಾಗಿ ಪತ್ತೆಹಚ್ಚಿ ಪಾಲಕರ ಮಡಿಲಿಗೆ ಒಪ್ಪಿಸಬಲ್ಲ ಸಾಧನಗಳು ಇವು. ಕುಂಭಮೇಳಕ್ಕಾಗಿಯೇ 40 ಸಾವಿರ ಟ್ಯಾಗುಗಳನ್ನು ಖರೀದಿಸಲಾಗಿದೆ. ಇದು ಒಂದು ಬಗೆಯಲ್ಲಿ ನಿಸ್ತಂತು ಸಂಪರ್ಕ ಸಾಧನ ವ್ಯವಸ್ಥೆ. ವಿದ್ಯುತ್ಕಾಂತೀಯ ಅಲೆಗಳ ಮೂಲಕ ಕಾರ್ಯನಿರ್ವಹಿಸುತ್ತವೆ.

### ಕಾರ್ಪೊರೇಟ್ ಝುಗಮುಗ!

ಸಾಗರದಂತೆ ಜನ ಒಂದೆಡೆ ಸೇರುವಾಗ ಕಾರ್ಪೊರೇಟ್ ವಲಯ ಈ ಅವಕಾಶ ತಪ್ಪಿಸಿಕೊಂಡೀತೇ? 'ಕುಂಭ ಮೇಳ'ದಂಥ 'ಧಾರ್ಮಿಕ ಇವೆಂಟ್'ನಲ್ಲಿ ತಮ್ಮ ಉತ್ಪನ್ನಗಳ ಪ್ರಚಾರಕ್ಕೆ ಬಹುತೇಕ ಕಂಪನಿಗಳು ಹಾತೊರೆಯುತ್ತವೆ. ಈಗಾಗಲೇ ನೂರಕ್ಕೂ ಹೆಚ್ಚು ಕಂಪನಿಗಳು ಈ ಪ್ರಚಾರ ಕಾರ್ಯದಲ್ಲಿ ನಿರತವಾಗಿವೆ. ವಿಮಾನಯಾನ ಸಂಸ್ಥೆಗಳು, ಮೊಬೈಲ್ ಕಂಪನಿಗಳು, ಬ್ಯಾಂಕುಗಳ ವರ್ಣರಂಜಿತ ಪರದೆಗಳು ಮೇಳದಲ್ಲಿ ಕಾಣಿಸಿಕೊಂಡಿವೆ.

ಅಂದಹಾಗೆ, ಬರೀ ಲಾಭದತ್ತ ಈ ಕಂಪನಿಗಳು ತಮ್ಮ ಗಮನವನ್ನು ಕೇಂದ್ರೀಕರಿಸಿಲ್ಲ. ಬದಲಾಗಿ ಸೀಮಿತ ಪರಿಧಿಯಲ್ಲಿ ಸೇವಾಕಾರ್ಯಕ್ಕೆ ಮುಂದಾಗಿವೆ. ಉದಾಹರಣೆಗೆ, ಕೋಲ್ಗೇಟ್ ಕಂಪನಿಯು ಉಚಿತವಾಗಿ ಮೂರು ಕೋಟಿ ಸ್ಯಾಂಪಲ್‌ಗಳಷ್ಟು 'ವೇದಶಕ್ತಿ' ಪೇಸ್ಟ್ ವಿತರಿಸುತ್ತಿದೆ. ಮತ್ತೆ ಹಲವು ಕಂಪನಿಗಳು ಭಕ್ತರಿಗೆ ದಾರಿ ಮಧ್ಯೆ ಉಟೋಪಚಾರದ ಹೊಣೆ ಹೊತ್ತುಕೊಂಡಿವೆ, ಶಕ್ತ್ಯಾನುಸಾರ ದೇಣಿಗೆಯನ್ನೂ ಕೊಟ್ಟಿವೆ.

ಇಷ್ಟು ದೊಡ್ಡ ಮೇಳ ಸಂಘಟಿಸುವಾಗ ಸುರಕ್ಷತೆ ಅಥವಾ ಭದ್ರತೆ ಬಗ್ಗೆ ಪ್ರಶ್ನೆ ಮೂಡುವುದು ಸಹಜ. ಭೇಟಿ ನೀಡುವವರ ಸುರಕ್ಷತೆ ಖಚಿತವಾದಾಗ ಮಾತ್ರ ಮೇಳದ ಸುರಕ್ಷತೆ ಬಗ್ಗೆ ವಿಶ್ವಾಸ ಮೂಡುತ್ತದೆ. ಸಂಚಾರ ನಿಯಂತ್ರಣ, ಮಕ್ಕಳು ದಾರಿ ತಪ್ಪಿ ಹೋಗುವುದು, ಭಕ್ತರ ಸುರಕ್ಷತೆ, ಕಳವಿಗೆ ಆಸ್ಪದ ನೀಡದಂತೆ ನೋಡಿಕೊಳ್ಳುವುದು ಇವೇ ಮೊದಲಾದ ವಿಷಯಗಳು ಪ್ರಾಮುಖ್ಯ ಪಡೆಯುತ್ತವೆ. ಹಳೆಯ ಅನುಭವಗಳನ್ನು ಪರಿಶೀಲಿಸಿ, ಸಮಸ್ಯೆಗಳಾವುವೂ ಉದ್ಭವಿಸದಂತೆ ಕಟ್ಟುನಿಟ್ಟಾದ ಮುನ್ನೆಚ್ಚರಿಕೆಗಳನ್ನು ನೀಡಲಾಗಿದೆ.

ತ್ರಿವೇಣಿ ಸಂಗಮದಲ್ಲಿ ಮಕರ ಸಂಕ್ರಾಂತಿಯಂದು ಆರಂಭವಾದ ಕುಂಭಮೇಳದ ಮೊದಲ ದಿನದಲ್ಲಿ ಒಂದೂಕಾಲು ಕೋಟಿ ಜನರು ಪುಣ್ಯ ಸ್ನಾನ ಮಾಡಿದ್ದಾರೆ. ಇದರಿಂದ ಆತ್ಮ ಹಾಗೂ ದೇಹ ಶುದ್ಧಿಯಾಗಿ, ಶರೀರವು ಜೀವ ಮೃತ್ಯುವಿನ ವೃತ್ತದಿಂದ ಮುಕ್ತಿ ಹೊಂದುತ್ತದೆ ಎಂಬ ನಂಬಿಕೆ ಭಕ್ತಗಣದ್ದು. 'ಪವಿತ್ರ ಸ್ನಾನ' ಮಾಡಿದ ಬಳಿಕ ಅವರು ನೆಮ್ಮದಿಯಿಂದ ತಮ್ಮ ಊರಿಗೆ ಮರಳುತ್ತಾರೆ. ಆ ನೆಮ್ಮದಿ–ಭರವಸೆಯನ್ನು ಜನರಲ್ಲಿ ಮೂಡಿಸಲು ಆಡಳಿತಯಂತ್ರ ಮಾಡುವ ಕೆಲಸ ಹಾಗೂ ಪರಿಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂಬುದು ಅಷ್ಟೇ ನಿಜ.